ತನ್ನ ರಂಗಿಸಿದ ತುಟಿಚಾಚಿ ಉಂಗುರಕ್ಕೊಂದು ಮುತ್ತು ಕೊಟ್ಟಳು. ತಕ್ಷಣವೇ ವೀಡಿಯೊಕಾಲ್ ಮಾಡಿ ಕಳುಹಿಸಿದಾತನೊಡನೆ ಖುಷಿಖುಷಿಯಾಗಿ ಮಾತಾಡತೊಡಗಿದಳು!

‘ಎಂಥಾ ಮಶೀನ್‌ರೀ ಇದು...? ಟೆಲಿಪೋರ್ಟ ಮಶೀನ? ಮಾರ್ಕೆಟ್ಟಕ್ಕ ಬಂದಾವೇನ ಇವು?...’

‘ಅವೆಲ್ಲಾ ಬರೆ ಸಾಯಿನ್ಸ ಫಿಕ್ಷನ್‌ದಾಗ ಮಾತ್ರ ಅವ. ಮನಶ್ಯಾ ಸ್ಪೇಸು, ಡಿಸ್ಟನ್ಸು, ಟೈಮ್ಮು, ಸ್ಪೀಡು ಇವನ್ನಷ್ಟು ಕಂಟ್ರೋಲ್ ಮಾಡಲಿಕ್ಕೆ ಕಲತಾ ಅಂದ್ರ... ಇಡೀ ಜಗತ್ತು ಬದಲಿ ಆಗಿಹೋಗ್ತದ. ಕ್ವಾಂಟಮ್ ಟೆಲಿಪೋರ್ಟೇಶನ್ ಅಂತಾರ. ಅದೇನು ಅಷ್ಟ ಸರಳ ಅದ ಏನು...?’

‘ಇಂಥಾದ್ದೊಂದು ಮಶೀನ ಬಂದ್ರ ಎಷ್ಟ ಛೊಲೊ ಆಗ್ತದ್ರೀ... ಹುಡುಗ್ರು ಮತ್ತ ನಾವು, ಎಲ್ಲಾರ ಕಡೇನೂ ಒಂದೊಂದ ಇದ್ದ ಬಿಟ್ರ, ವಿನ್ಯಾಗ ಹೋಳಗಿ ಮಾಡಿ ಕಳಸಬಹುದ್ದು, ವಿಶೂಗ ಪಾಯಸಾ... ಪುಟ್ಟೂಗ ನಾ ಮಾಡಿದ್ದು ಮೈಸೂರಪಾಕ ಭಾಳ ಸೇರತಾವ... ಮತ್ತ ಆ ಛೋಟಿ... ಚಕ್ಲಿ ಚಕ್ಲಿ ಅಂತ ಬಡಕೋತದ...’

‘ನಿಂದೊಂದು... ಇಂಥಾದ್ದೇನರ ಕಂಡಹಿಡದ್ರ ಎಲ್ಲಾರೂ ಸ್ಪೇಸಕ್ಕ ಸಾಮಾನ ಕಳಸೂದು, ಬ್ಯಾರೆ ಗ್ರಹಕ್ಕ ಹೋಗೂದು ಇವನ್ನ ವಿಚಾರ ಮಾಡ್ತಾರ. ನೀ ನೋಡು. ಉಂಡಿ ಚಕ್ಲಿ ಕಳಸೂ ವಿಚಾರ ಮಾಡಲಿಕತ್ತಿ’ ಅಪಹಾಸ್ಯ ಮಾಡಿದರು ವಾಮನರಾಯರು.

‘ನೀವು ಕೊಂಕ ನಗಬ್ಯಾಡ್ರಿ. ನನ್ನ ಭಾವನಾ ನಿಮಗ ಅರ್ಥನ ಆಗಂಗಿಲ್ಲಾ. ಹೊತ್ತು ಹೆತ್ತಿದ್ರ ತಿಳೀತಿತ್ತು. ಮಕ್ಕಳ ಹೊಟ್ಟಿ ನೆತ್ತಿ ಅಂತ ತಾಯಿ ಆದಾಕಿ ಕಾಳಜಿ ಮಾಡದ ಮತ್ಯಾರ ಮಾಡ್ತಾರ? ಎಷ್ಟ ದೊಡ್ಡವ್ರಾದ್ರೇನು ನನಗ ಮಕ್ಕಳ...’ ವಿಮಲಮ್ಮ ಸಿಡಿಮಿಡಿಯಾದರು. ‘ದೇವ್ರು ಮನಸ ಮಾಡೀದ್ರ ಎಷ್ಟೊತ್ತು... ಕಣ್ಣ ಮುಚ್ಚಿ ತಗಿಯೂದ್ರಾಗ ಮಶೀನ ಬರತದ’.

‘ಆಗ್ಲಿ ಮಾರಾಯ್ತಿ... ದೇವ್ರು ನಿನ್ನ ಇಚ್ಛಾಕ್ಕ ತಥಾಸ್ತು ಅನ್ನಲಿ. ಮಕ್ಕಳು ಮಮ್ಮಕ್ಕಿಗೆ ಏನೇನ ಮಾಡಿ ತಿನಸ್ತೀ... ಎಷ್ಟ ದಿನಾಂತ ನಾನೂ ನೋಡತೇನಿ’ ರಾಯರು ಟೀವಿಯತ್ತ ಗಮನ ಹರಿಸಿದರು.

***

ಬೆಳಿಗ್ಗೆ ಎದ್ದಾಗ ಅಡುಗೆ ಕಟ್ಟೆಯ ಮೇಲೊಂದು ಮಿರಿಮಿರಿ ಮಿಂಚುವ ಕೆಂಪು ಪೆಟ್ಟಿಗೆ ಕುಳಿತಿತ್ತು. ಸಂಶಯವೇ ಇಲ್ಲ. ಅದೇ ಬಣ್ಣ, ಅದೇ ಗಾಜಿನ ಬಾಗಿಲು... ಹೂಬಹೂ ಟೀವೀಯಲ್ಲಿ ನೋಡಿದಂಥ ಟೆಲಿಪೋರ್ಟ್ ಯಂತ್ರ. ಬಲ ಮೇಲ್ಮೂಲೆಯಲ್ಲೊಂದು ಕೊಳಲು ಹಿಡಿದ ಕೃಷ್ಣನ ಚಿತ್ರ, ಅದರ ಕೆಳಗೆ ನಾರದ ಎಂಬ ಒಕ್ಕಣೆ! ದೇವರು ‘ತಥಾಸ್ತು’ ಎಂದಿದ್ದನೇನೊ! ವಿಮಲಮ್ಮನ ಸಂಭ್ರಮಕ್ಕೆ ಪಾರವೇ ಇಲ್ಲ. ತಕ್ಷಣ ಅದರ ಫೋಟೊ ತೆಗೆದು ತಮ್ಮ ಫ್ಯಾಮಿಲಿ ವಾಟ್ಸಾಪ್‌ಗೆ ಪೋಸ್ಟ ಮಾಡಿದರು. ‘ನಿಮ್ಮಲ್ಲೂ ಇಂಥ ಮಶೀನ್ ಬಂದಿದೆಯೆ?’, ‘ಹೌದು.’

ವಿಮಲಮ್ಮ ಕಣ್ಣು ಮುಚ್ಚಿ ಭಕ್ತಿಯಿಂದ ದೇವರಿಗೆ ಕೈ ಮುಗಿದರು. ‘ಕೃಷ್ಣಾ... ನಮ್ಮಪ್ಪಾ, ನಿನ್ನ ಆಟ ಯಾರಿಗೆ ತಿಳದೀತಪಾ’ ಎನ್ನುತ್ತ ಭಾವುಕರಾದರು. ತಕ್ಷಣವೇ ಮೂವರೂ ಮಕ್ಕಳೊಡನೆ ವೀಡಿಯೊ ಕಾನ್ಫರೆನ್ಸ್‌ನಲ್ಲಿ ಹೇಳು ಕೇಳುವುದನ್ನೆಲ್ಲ ಮಾಡಿ, ಟೊಂಕಕ್ಕೆ ಸೆರಗು ಕಟ್ಟಿಯೇ ಬಿಟ್ಟರು. ಪರೀಕ್ಷೆಗಾಗಿಯೇ ಆದರೂ ಹೊಸ ಮಶೀನಿನಲ್ಲಿ ಏನಾದರೂ ಸಿಹಿಯನ್ನೇ ಕಳುಹಿಸಬೇಕಲ್ಲ. ಬೇಸನ್ ಉಂಡೆಗಳು ತಯಾರಾದವು. ‘ನಾರದ’ದಲ್ಲಿ ಮೂರು ಉಂಡೆಗಳನ್ನು ಒಳಗಿಟ್ಟು ಬಾಗಿಲು ಲಾಕ್ ಮಾಡಿ, ವಿಶ್ವನಾಥನ ಕೋಡ್ ಒತ್ತಿ ದೂರ ಸರಿದು ನಿಂತರು. ಸ್ಟಾರ್ಟ್ ಬಿರಡೆ ಒತ್ತುವುದೇ ತಡ, ಒಳಗಿನ ತಟ್ಟೆ ಗರ್‍ರನೆ ತಿರುಗತೊಡಗಿ, ದೀಪ ಪಕಪಕಿಸತೊಡಗಿ, ಕೆಲವಾರು ಕ್ಷಣಗಳ ನಂತರ ಎಲ್ಲವೂ ಸ್ತಬ್ಧವಾಯಿತು. ಕಣ್ಣು ಪಿಳುಕಿಸದೇ ನಿಂತಿದ್ದ ವಿಮಲಮ್ಮ, ಪರೀಕ್ಷೆ ಫಲಿತಾಂಶಕ್ಕೆ ಕಾಯುವವರಂಥ ಟೆನ್ಷನ್‌ನಲ್ಲಿ ಮುಂದರಿದು, ನಾರದದ ಬಾಗಿಲು ತೆರೆದರು. ಉಂಡೆಗಳು ಮಟಾಮಾಯ! ಉದ್ವೇಗದಿಂದ ವಿಗ್ರಹವಾಗಿದ್ದ ವಿಮಲಮ್ಮನಿಗೆ ಮೊಬೈಲ್ ಹಾಡತೊಡಗಿದಾಗಲೇ ಎಚ್ಚರ. ವಿಶ್ವನಾಥ ರಸೀದಿ ಕೊಟ್ಟ. ‘ಅವ್ವಾ, ನಿನ್ನ ಕೈ ಉಂಡಿ ಅಂದ್ರ ಏನ ರುಚಿ ಅವ್ವಾ... ನಾಲಿಗಿ ಖುಷ್ ಆತ ನೋಡು’ ಅಂದ. ವಿಮಲಮ್ಮ ಸ್ವರ್ಗಸುಖದಲ್ಲಿ ತೇಲಾಡುತ್ತ ವಿನಯ ವೀಣಾರಿಗೂ ಉಂಡೆಗಳನ್ನು ರವಾನಿಸಿದರು. ಅವರಲ್ಲಿನ ಮಾತೃತ್ವ ಸಂತೃಪ್ತವಾಯಿತು.

ಅಂದಿನಿಂದ ಹಬ್ಬದ ಸಿಹಿಗಳನ್ನು, ಎಂದಾದರೂ ಮಾಡಿದ ವಿಶೇಷ ಭಕ್ಷ್ಯಗಳನ್ನು ಮಕ್ಕಳಿಗೆ ‘ನಾರದ ರವಾನೆ’ ಮಾಡಿದಾಗಲೇ ವಿಮಲಮ್ಮನ ಗಂಟಲಲ್ಲಿ ಅನ್ನ ಇಳಿಯುತ್ತಿದ್ದುದು.

ಒಂದು ದಿನ ವೀಣಾ ಕರೆಮಾಡಿದಳು, ‘ಅವ್ವಾ, ಮಸಾಲಿ ಹ್ಯಾಂಗ ಮಾಡಬೇಕು ಹೇಳು. ಈ ಕೊಂಡ ಮಸಾಲೀಗೆ ಮನೀದರ ಟೇಸ್ಟ ಬರೂದ ಇಲ್ಲಾ’, ‘ನೀ ಎಲ್ಲೆ ಮಾಡಿಕೋತ ಕೂಡತೀ... ವಾರೆಲ್ಲಾ ದುಡದು ದಣದಿರತಿ... ನಾ ಮಾಡಿ ಕಳಸತೇನೇಳು’ ಎನ್ನುತ್ತ ವಿಮಲಮ್ಮ ಮಸಾಲೆ ಹುರಿಯಲು ಒಲೆಯ ಮೇಲೆ ಬಾಣಲೆ ಇಟ್ಟರು.

ಒಂದು ದಿನ ವಿನಯ ಕೇಳಿದ, ‘ಅವ್ವಾ, ಒಂದಿವ್ಸ ಒಂದ್ನಾಲ್ಕು ಭಕ್ರಿ ಮಾಡಿ ಕಳಸಲಾ... ತಿನಬೇಕನಸ್ಲಿಕತ್ತದ. ಅದರ ಜೋಡಿ ಶೇಂಗಾಚಟ್ನಿ, ಒಂದೆರ್ಡು ತುಂಬಗಾಯಿ... ಕಳಸೀದ್ರ ಛೊಲೊ ಅನಲಿಕತ್ತಾಳ ನಿನ್ನ ಸೊಸಿ... ಆಗ್ತದೇನು?’

‘ಅಯ್ಯ ಬಾಳಾ, ನೀ ಕೇಳೂದ್ವೆಚ್ಚೊ ನಾ ಕಳಸೂದ್ವೆಚ್ಚೊ? ಜ್ವಾಳಾ ಬೀಸಿಸ್ಕೊಂಡು ಬಂದು ಮಾಡಿ ಕಳಸ್ತೇನಂತ’ ವಿಮಲಮ್ಮ ಕಳಿಸಿದರು.

‘ಅವ್ವಾ, ನಿನ್ನ ಮಮ್ಮಗ ಸದ್ಯಾ ದ್ವಾಶಿ ಚಟ್ನಿ ಬೇಕು ಅಂತ ಹಟಾ ಮಾಡಲಿಕತ್ತಾನ... ನಿನ್ನ ಫ್ರಿಜ್‌ನ್ಯಾಗೇನರ ಹಿಟ್ಟು ಉಳದದೇನು? ನಾಷ್ಟಾಕ್ಕ ನೀ ಅದನ್ನ ಮಾಡಿದ್ದೆಲಾ...?’

‘ಅವ್ವಾ, ಇವತ್ತ ನಿನ್ನ ಸೊಸಿ ನೈಟ್ ಡ್ಯೂಟೀಗೆ ಹೋಗ್ಯಾಳ. ನಾ ಈಗ ಬಂದೆ ಡ್ಯೂಟಿ ಮುಗಸಿ. ತಿನಲಿಕ್ಕೆ ಫ್ರಿಜ್‌ನಾಗ ಏನೂ ಇಲ್ಲೇ ಇಲ್ಲ. ಹಸಿವ್ಯಾಗೇದ... ಏನರ ಕಳಸತೀ ಏನು?’ ವಿಮಲಮ್ಮನ ಕರುಳ ಚುರಕ್ಕೆಂದಿತು.

‘ಅವ್ವಾ, ದಿನಾಲೂ ಆಫೀಸಕ್ಕ ಡಬ್ಬಿವಳಗ ಆ ಕೊಂಡ ತಂದ ರೋಟಿ ಹಕ್ಕೊಂಡ ಹೋಗ್ತೇವಲಾ... ನಾರ ಹಡಿ ಆಗಿರ್ತಾವ. ಹಲ್ಲನ್ಯಾಗ ಹಿಡದು ಹರೀಬೇಕು. ಆಫೀಸ್ ಟೈಮಕ್ಕ ಒಂದು ಆರೆಂಟ ಚಪಾತಿ ಮಾಡಿ ಕಳಸಲಿಕ್ಕೆ ಆಗತದೇನು ಕೇಳ್ರಿ, ಅತ್ತೆವ್ರು ಹ್ಯಾಂಗಾದ್ರೂ ಮನ್ಯಾಗ ಇರ್ತಾರಲಾ ಅಂತಾಳ ಇಕಿ... ಪಲ್ಯಾ ಏನರ ನಾವು ಮಾಡಿಕೋತೇವಿ...’

‘‘ಅವ್ವಾ ನಾಳಿಗೆ ಒಂದೈವತ್ತ ಚಪಾತಿ, ವಾಂಗೀಭಾತು, ಒಂದೇನರ ಸ್ವೀಟು... ಗುಲಾಬ ಜಾಮೂನು ನಡೀತದ... ಮಾಡಿ ಕಳಸು. ನಿನ್ನ ಅಳ್ಯಾ ಒಂದಿಷ್ಟ ಫ್ರೆಂಡ್ಸನ ಊಟಕ್ಕ ಕರದಾರ. ಎಲ್ಲಾರೂ ಇಂಡಿಯನ್ಸು. ನಮ್ಮಲ್ಲೀ ಊಟ ಅಂದ್ರ ಬಾಯಿ ಚಪ್ಪರಿಸಿ ಹೊಡೀತಾರ. ನಾಳೆ ಸಂಜಿ ಆರ ಅನ್ನೂದ್ರಾಗ ಕಳಿಸಿಬಿಡು.’

ಮೊದಮೊದಲು ಖುಷಿಯಿಂದಲೇ ಮಾಡಿದರು ವಿಮಲಮ್ಮ. ಇಳಿವಯಸ್ಸಿನಲ್ಲಿ ಇಬ್ಬರ ಅಡುಗೆ ಕೆಲಸಗಳಿಗೆ ಹೊಂದಿಕೊಂಡಿದ್ದವರಿಗೆ, ಯಾವಾಗಾದರೊಮ್ಮೆ ವಿಶೇಷಗಳನ್ನು ಮಾತ್ರ ಮಾಡಿ ಕಳಿಸುವುದು ಅಂಥ ತ್ರಾಸವೆನಿಸಿರಲಿಲ್ಲ. ಅನ್ನಪೂರ್ಣೇಶ್ವರಿಯ ಧನ್ಯತೆಯಿಂದ ಬೀಗುತ್ತಿದ್ದರು. ಬರಬರುತ್ತ ಬೇಡಿಕೆಗಳು ಏರುತ್ತ, ದಿನನಿತ್ಯದವಾದವು. ಬೇಡಿಕೆಗಳು ಹಕ್ಕುಗಳಾದವು. ಎಮೋಶನಲ್ ಬ್ಲ್ಯಾಕ್‌ಮೇಲ್. ವಿಮಲಮ್ಮ ಸೋತು ಹೋಗಿದ್ದರು.

‘ನನಗ ಅಷ್ಟ ಅರಾಮ ಇಲ್ಲ ವೀಣಾ. ಮೈಕೈ ನೋವು, ತಲಿನೋವು ಸಣ್ಣಗ ಜ್ವರಾನೂ ಅವ. ಅಷ್ಟೆಲ್ಲಾ ಹ್ಯಾಂಗ ಮಾಡ್ಲೇ...’

‘ನಿನ್ನ ನಂಬಿಕೊಂಡು ನಾವು ಊಟಕ್ಕ ಕರದೇವಿ ಈಗ. ನೀ ಆಯ್ತಾ ವ್ಯಾಳ್ಯಾಕ್ಕ ಕೈ ಕೊಟ್ರ ಹ್ಯಾಂಗ ಅವ್ವಾ? ನಾಕ ಮಂದ್ಯಾಗ ಮರ್ಯಾದಿ ಹೋಗತದ...’

ವಿಮಲಮ್ಮನ ಕಣ್ಣಲ್ಲಿ ನೀರಾಡಿತು. ಮಕ್ಕಳು ತನ್ನಿಂದ ಇಷ್ಟೆಲ್ಲ ಮಾಡಿಸಿಕೊಳ್ಳುತ್ತಾರೆ. ತನಗೆ ಆರಾಮ ಇಲ್ಲವೆಂದರೆ, ‘ಅವ್ವಾ, ನಾ ಒಂದು ಅನ್ನಾ ಮಾಡಿ ಕಳಸ್ತೇನೇಳು... ನೀ ರೆಸ್ಟ ತೊಗೊ’ ಅನ್ನುವ ಮಾತು ಬಾಯಿಯಿಂದ ಬರುವುದಿಲ್ಲ. ತನ್ನ ಮೇಲೆ ಸಿಟ್ಟಿಗೇಳುತ್ತಾರೆ. ಮಕ್ಕಳು ಸೊಸೆಯಂದಿರು ಎಲ್ಲರೂ ಇಷ್ಟೇ. ಈ ತನಕ ಒಂದು ದಿನವಾದರೂ ಏನಾದರೂ ಮಾಡಿ ಕಳಿಸಿದ್ದಾರೆಯೆ?

ನಡೆಯುತ್ತಿರುವುದನ್ನೆಲ್ಲ ಮೌನವಾಗಿ ನೋಡುತ್ತಲೇ ಇದ್ದ ವಾಮನರಾಯರು ವಿಮಲಮ್ಮನಿಗೆ ರಗ್ಗು ಹೊದಿಸುತ್ತ ಹೇಳಿದರು: ‘ಇದಕ್ಕ ಅಂತಾರ ನೋಡು, ಆ ಬೈಲ್ ಮುಝೆ ಮಾರ ಅಂತ. ಮಕ್ಕಳು ದೊಡ್ಡವ್ರಾಗ್ಯಾರ. ತಮ್ಮದ ತಾವು ನೋಡಿಕೋತಾರ. ಇನ್ನೇನಿದ್ರೂ ನಾವು ನಮ್ಮಿಬ್ರದೂ ನೋಡಿಕೊಂಡು ಜಪ್ಪಸಿಕೊಂಡು ಇರೋದಷ್ಟ. ಏನರ ಆದರ ಮಕ್ಕಳು ಬಂದ ನಿಂತು ಮಾಡತಾರ ಅಂತ ಆಶಾ ಇಟಗೋಬ್ಯಾಡಾ’.

ನಿಜ ಅನ್ನಿಸಿತು. ವಿಮಲಮ್ಮ ದೇವರಿಗೆ ಬೇಡಿಕೊಂಡರು: ‘ಆ ನಾರದನನ್ನ ಹೇಗೆ ತಂದಿಟ್ಟಿದ್ದೆಯೋ, ಹಾಗೇ ತೊಗೊಂಡು ಹೋಗಿಬಿಡಪ್ಪಾ’.

ದೇವರು ತಥಾಸ್ತು ಅಂದನೊ ಇಲ್ಲವೋ?